**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು**

**ವಿಷಯ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ **ಸಹ ಪ್ರಾಧ್ಯಾಪಕರು /ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರಿಗೆ** ಸಿ.ಎ.ಎಸ್ ರಡಿಯಲ್ಲಿ 2018ರ ಯುಜಿಸಿ ನಿಯಮಗಳ ಅನ್ವಯ ಶೈಕ್ಷಣಿಕ ಹಂತ 13ಎ ಇಂದ ಶೈಕ್ಷಣಿಕ ಹಂತ 14 ರ ಸ್ಥಾನೀಕರಣ ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:**
1. ಯು.ಜಿ.ಸಿ. ನಿಯಮಗಳ ಆದೇಶ ಸಂಖ್ಯೆ: ಎಫ್1-2/2017(ಇಸಿ/ಪಿಎಸ್), ದಿ:18.07.2018
2. ಸರ್ಕಾರಿ ಆದೇಶ ಸಂಖ್ಯೆ: ಇಡಿ 483 ಯುಎನ್ಇ 2017, ದಿ:16.03.2019 ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಆದೇಶ ಹಾಗೂ ಮಾರ್ಗಸೂಚಿಗಳು.
3. ಸರ್ಕಾರಿ ಆದೇಶ ಸಂಖ್ಯೆ: ಇಡಿ 123 ಡಿಸಿಇ 2020, ದಿ:02.03.2021
4. ಸರ್ಕಾರದ ಪತ್ರ ಸಂಖ್ಯೆ: ಇಡಿ 147 ಡಿಸಿಇ 2022 (ಇ) ದಿನಾಂಕ: 03.11.2022.
5. ಸರ್ಕಾರದ ಆದೇಶ ಸಂಖ್ಯೆ: ಇಡಿ 147 ಡಿಸಿಇ 2022 (ಇ) ದಿನಾಂಕ: 08.12.2023.
6. ಕೇಂದ್ರ ಕಛೇರಿಯಲ್ಲಿ ದಿನಾಂಕ: 06-01-2023 ರಿಂದ ದಿನಾಂಕ: 06-01-2024 ರವರೆಗೆ ನಡೆದ ಸಿ.ಎ.ಎಸ್ ಆಯ್ಕೆ ಸಮಿತಿಯ ಸಭೆ.
7. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಡಿ 147 ಡಿಸಿಇ 2022 (ಇ) ದಿನಾಂಕ: 26.02.2024.

* * * *

<u>ಪ್ರಸ್ತಾವನೆ :</u>

ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ **ಸಹ ಪ್ರಾಧ್ಯಾಪಕರು /ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರಿಗೆ** 2016ರ ಪರಿಷ್ಕತ ಯು.ಜಿ.ಸಿ. ವೇತನ ಶ್ರೇಣಿಗಳನ್ನು ಉಲ್ಲೇಖ(1) ಹಾಗೂ (2)ರ ಆದೇಶಗಳಲ್ಲಿ ಜಾರಿಗೊಳಸಲಾಗಿರುತ್ತದೆ. ಈ ಆದೇಶದಲ್ಲಿ **ಸಹ ಪ್ರಾಧ್ಯಾಪಕರು /ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರು** ಶೈಕ್ಷಣಿಕ ಹಂತ 13ಎ ಯು.ಜಿ.ಸಿ ವೇತನ ಶ್ರೇಣಿ ರೂ. 131400-217100 ರಲ್ಲಿ ಪೂರೈಸಿರುವ 03 ವರ್ಷಗಳ ಸೇವೆಯನ್ನು ಪರಿಗಣಿಸಿ ಸಿ.ಎ.ಎಸ್ ರಡಿಯಲ್ಲಿ ಉನ್ನತ ಶೈಕ್ಷಣಿಕ ಹಂತ 14 ರ ವೇತನ ಶ್ರೇಣಿ ರೂ.144200-218200 ರಲ್ಲಿ ಸ್ಥಾನೀಕರಣ ಹೊಂದಲು ಅವಕಾಶ ಕಲ್ಪಿಸಲಾಗಿರುತ್ತದೆ.

ಸರ್ಕಾರ ಹಾಗೂ ಯು.ಜಿ.ಸಿ.ಯ ಉಲ್ಲೇಖ (1) ಮತ್ತು (2)ರ ಆದೇಶಗಳನ್ವಯ 2016ರ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ಅನ್ವಯಿಸುವ ಷರತ್ತುಗಳಿಗೊಳಪಟ್ಟು ಸಿ.ಎ.ಎಸ್ ಯೋಜನೆಯಡಿಯಲ್ಲಿ (Career Advancement Scheme) ಉನ್ನತ ಶೈಕ್ಷಣಿಕ ಹಂತಗಳಲ್ಲಿ ಪದೋನ್ನತಿ ಮಂಜೂರು ಮಾಡಲು ಉಲ್ಲೇಖ (3)ರ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಉಲ್ಲೇಖ (1) ರಿಂದ (3) ರವರೆಗಿನ ಯುಜಿಸಿ ಮಾರ್ಗಸೂಚಿಗಳ ಹಾಗೂ ಸರ್ಕಾರದ ಆದೇಶ ಅನುಸಾರ ಶೈಕ್ಷಣಿಕ ಹಂತ 13ಎ ರಿಂದ ಉನ್ನತ ಶೈಕ್ಷಣಿಕ ಹಂತ 14 ರಲ್ಲಿ ಸ್ಥಾನೀಕರಣ ಮಂಜೂರು ಮಾಡುವ ಸಂಬಂಧ ಪ್ರಾಂಶುಪಾಲರು ತಮ್ಮ ಹಂತದಲ್ಲಿ ಯು.ಜಿ.ಸಿ.ಯ ದಿನಾಂಕ: 18.07.2018ರ ಕಂಡಿಕೆ 5.0 ರಿಂದ 6.4 ವರೆಗಿನ ಪ್ರಕಾರ ಆಯ್ಕೆ ಸಮಿತಿಯನ್ನು ರಚಿಸಿ **ಸಹ ಪ್ರಾಧ್ಯಾಪಕರು /ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರಿಗೆ** ಸಂಬಂಧಿಸಿದಂತೆ, ಯು.ಜಿ.ಸಿ.ಯ ದಿ. 18/07/2018 ರ ಅಧಿಸೂಚನೆಯಲ್ಲಿ ನೀಡಲಾಗಿರುವ 6.4 B (IV) UGC Regulations-2018 ರಂತೆ Appendix II Table 1 & Table 2 ಸಹ ಪ್ರಾಧ್ಯಾಪಕರು, Table 4 ಗ್ರಂಥಪಾಲಕರು, Table 5, ದೈಹಿಕ ಶಿಕ್ಷಣ ನಿರ್ದೇಶಕರು, ರ ಪ್ರಕಾರ ಕೂಲಂಕಷವಾಗಿ ಪರಿಶೀಲಿಸಿ, ಗ್ರೇಡಿಂಗ್/ಸಂಶೋಧನಾ ಅಂಕಗಳನ್ನು ಆಧರಿಸಿ ಶೈಕ್ಷಣಿಕ ಹಂತ 14 ಕ್ಕೆ ಅರ್ಹತೆ ಹೊಂದಿರುವವರ ಮಾಹಿತಿಗಳನ್ನು ನಿಗದಿತ ನಮೂನೆಗಳಲ್ಲಿ ಹಾಗೂ ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನೊಂದಿಗೆ ಅನುಮೋದನೆಗೆ ಸಲ್ಲಿಸಿದ್ದು, ಅದರ ಪ್ರಕಾರ ಪ್ರಾಂಶುಪಾಲರ ಹಂತದ ಸಮಿತಿಯು ಅರ್ಹ **ಸಹ ಪ್ರಾಧ್ಯಾಪಕರು /ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರಿಗೆ** ಶೈಕ್ಷಣಿಕ ಹಂತ 14 ಕ್ಕೆ ವೃತ್ತಿ ಪದೋನ್ನತಿಗಾಗಿ ಶಿಫಾರಸ್ಸು ಮಾಡಿರುತ್ತಾರೆ.

ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನ ಮೇರೆಗೆ ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ಈ ಕಛೇರಿಯ ಹಂತದಲ್ಲಿ ನಿಯಮಾನುಸಾರ ಪರಿಶೀಲಿಸಿ ಅರ್ಹತೆ ಹೊಂದಿರುವವರನ್ನು ಕೇಂದ್ರ ಕಛೇರಿಯಲ್ಲಿ ರಚಿಸಲಾಗಿರುವ ವಿಷಯ ತಜ್ಞರು ಹಾಗೂ ವಿಶ್ವವಿದ್ಯಾಲಯದ ಪ್ರತಿನಿಧಿಗಳನ್ನೊಳಗೊಂಡ ಆಯ್ಕೆ ಸಮಿತಿಯ ಮುಂದೆ ಪೂರಕ ದಾಖಲೆಗಳೊಂದಿಗೆ ಹಾಜರುಪಡಿಸಲಾಯಿತು. ಅದರನ್ವಯ ಸಂದರ್ಶನಕ್ಕೆ/ಪರಿಶೀಲನೆಗೆ ಹಾಜರಾದ ಸಹ ಪ್ರಾಧ್ಯಾಪಕರ ಚಟುವಟಿಕೆಗಳಿಗೆ ನೀಡುವ ಗ್ರೇಡಿಂಗ್/ ಸಂಶೋಧನಾ ಅಂಕಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳನ್ನು, ಸಂಶೋಧನಾ ಲೇಖನಗಳು, ಸಹ ಪ್ರಾಧ್ಯಾಪಕರ ಶೈಕ್ಷಣಿಕ ಸಾಧನೆ ಮತ್ತು ಇತರೆ ದಾಖಲೆಗಳನ್ನು ಪರಿಶೀಲಿಸಿ ಶೈಕ್ಷಣಿಕ ಹಂತ 14 ಕ್ಕೆ ಸ್ಥಾನೀಕರಣ ಮಂಜೂರು ಮಾಡಲು ತೀರ್ಮಾನಿಸಲಾಯಿತು. ಇಲಾಖಾ ಹಂತದ ಸಿ.ಎ.ಎಸ್ ಆಯ್ಕೆ ಸಮಿತಿಯ ತೀರ್ಮಾನದಂತೆ ಆಯ್ಕೆ ಹೊಂದಿದವರಿಗೆ ಯುಜಿಸಿ ವೇತನ ಶ್ರೇಣಿ ರೂ.144200-218200 ರಲ್ಲಿ ಶೈಕ್ಷಣಿಕ ಹಂತ 14 ಕ್ಕೆ ಸ್ಥಾನೀಕರಣ ಮಂಜೂರು ಮಾಡಲು ಈ ಆದೇಶ.

**ಆದೇಶ ಸಂಖ್ಯೆ:ಕಾಶಿಇ/77/ಶೈ.ಹಂತ/14/2023-24/ಬಸ್ಥಾವಿ ಬೆಂಗಳೂರು, ದಿನಾಂಕ : 26-02-2024**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ದಿನಾಂಕ : 02.03.2021ರ ಸಂಖ್ಯೆ : ಇಡಿ/123/ಡಿಸಿಇ/2020 ರ ಆದೇಶದ ಅನುಮೋದನೆ ಪ್ರಕಾರ ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನ ಮೇರೆಗೆ ಹಾಗೂ ಇಲಾಖಾ ಹಂತದ ಸ್ಥಾನೀಕರಣ ಆಯ್ಕೆ ಸಮಿತಿಯ ತೀರ್ಮಾನದಂತೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರಿಗೆ ಸಂಬಂಧಿಸಿದಂತೆ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಹೆಸರಿಸಿರುವ **ಸಹ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು/ ಗ್ರಂಥಪಾಲಕರಿಗೆ ಶೈಕ್ಷಣಿಕ ಹಂತ 14** ಕ್ಕೆ ಸಿ.ಎ.ಎಸ್ ರಡಿಯಲ್ಲಿ ಸ್ಥಾನೀಕರಣವನ್ನು ಯುಜಿಸಿ ವೇತನ ಶ್ರೇಣಿ ರೂ.144200-218200 **ರಲ್ಲಿ** ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಉಲ್ಲೇಖ (04), (05) ಮತ್ತು (07) ರ ಸರ್ಕಾರದ ಆದೇಶದಂತೆ ಸಿ.ಎ.ಎಸ್ ರಡಿ ಸ್ಥಾನೀಕರಣಕ್ಕೆ ಅರ್ಹತೆ ಹೊಂದಿದ ದಿನಾಂಕದಿಂದ ಅರ್ಹತಾ ಅವಧಿಯನ್ನು ಪರಿಗಣಿಸಿ, ವೇತನ ನಿಗದೀಕರಣ ಒಳಗೊಂಡಂತೆ ಸ್ಥಾನೀಕರಣದ ಆರ್ಥಿಕ ಸೌಲಭ್ಯಗಳನ್ನು ಸ್ಥಾನೀಕರಣ ಮಂಜೂರಾತಿ ಆದೇಶ ಹೊರಡಿಸಿದ ದಿನಾಂಕದಿಂದ ಭವಿಷ್ಯವರ್ತಿಯಾಗಿ ಅನ್ವಯವಾಗುವಂತೆ ಮಂಜೂರು ಮಾಡಿ ಆದೇಶಿಸಲಾಗಿದೆ.

**ಷರತ್ತುಗಳು :**

1. 2018ರ ಯುಜಿಸಿ ವೇತನ ಶ್ರೇಣಿಗಳಲ್ಲಿನ ಮಂಜೂರಾತಿಯು ಉಲ್ಲೇಖ (1) ರಿಂದ (4) ರವರೆಗಿನ ಯುಜಿಸಿ/ಸರ್ಕಾರದ ಆದೇಶಗಳಲ್ಲಿನ ನಿಯಮಗಳ ನಿಬಂಧನೆಗಳೊಪಟ್ಟಿರುತ್ತದೆ.
2. ಯು.ಜಿ.ಸಿ.ಯ ದಿ. 18/07/2018ರ ಅಧಿಸೂಚನೆಯಲ್ಲಿ ನೀಡಲಾಗಿರುವ Clause 6.4 of UGC Regulations-2018_ರಲ್ಲಿ ನಿಗದಿಪಡಿಸಿರುವ ಎಲ್ಲಾ ಅಂಶಗಳನ್ನು ಪೂರೈಸಿರುವ ಬಗ್ಗೆ ಆಯ್ಕೆ ಸಮಿತಿಯು ಪರಿಶೀಲಿಸಿ ಶಿಫಾರಸ್ಸು ಮಾಡಿರುವ ಮೇರೆಗೆ ಮಂಜೂರಾತಿಗೆ ಅನುಮೋದನೆ ನೀಡಲಾಗಿದ್ದು, ಸಂಪೂರ್ಣ ಜವಾಬ್ದಾರಿ ಪ್ರಾಂಶುಪಾಲರ ಹಂತದ ಸಮಿತಿಯದ್ದಾಗಿರುತ್ತದೆ. ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಯಾವುದೇ ತಪ್ಪು ಮಾಹಿತಿಗಳನ್ನು ಒದಗಿಸಿರುವುದು ಕಂಡು ಬಂದಲ್ಲಿ ಸಂಬಂಧಿಸಿದ ಸಹ ಪ್ರಾಧ್ಯಾಪಕರ ವೃತ್ತಿ ಪದೋನ್ನತಿ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆಯನ್ನು ನೀಡದೇ ಹಿಂಪಡೆಯಲಾಗುವುದು. ಮತ್ತು ತಪ್ಪು ಮಾಹಿತಿ ಒದಗಿಸಿದ ಸಹ ಪ್ರಾಧ್ಯಾಪಕರು ಹಾಗೂ ಶಿಫಾರಸ್ಸು ಮಾಡಿದ ಪ್ರಾಂಶುಪಾಲರುಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು.
3. ಬೋಧಕರ ಖಾಯಂ ನೇಮಕಾತಿ ದಿನಾಂಕ, ಯು.ಜಿ.ಸಿ. ವೇತನ ನಿಗಧೀಕರಣದ ದಿನಾಂಕ, ವೇತನ ರಹಿತ ರಜೆ/ಅನಧಿಕೃತ ಗೈರು ಹಾಜರಿ, ಶಿಸ್ತು ಕ್ರಮದ ಮಾಹಿತಿ, ಸಂಶೋಧನಾ ಲೇಖನ ಇನ್ನಿತರೆ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಪ್ರಾಂಶುಪಾಲರ ಹಂತದ ಸಮಿತಿಯು ಮತ್ತೊಮ್ಮೆ ಪರಿಶೀಲಿಸುವ ನಿಬಂಧನೆಗೊಳಪಟ್ಟಿರುತ್ತದೆ.
4. ಈ ವೃತ್ತಿ ಪದೋನ್ನತಿ ಮಂಜೂರಾತಿಯು ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ/ ಸುತ್ತೋಲೆ/ಪತ್ರಗಳಲ್ಲಿ ನಿಗದಿಪಡಿಸುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
5. ಬೋಧಕರ ಸ್ಥಾನೀಕರಣವನ್ನು ಸೇವಾ ಜ್ಯೇಷ್ಠತೆಗೆ ಪರಿಗಣಿಸಲು ಅವಕಾಶವಿರುವುದಿಲ್ಲ.
6. ಈ ಆದೇಶದನ್ವಯ ಮಂಜೂರು ಮಾಡಲಾದ ಶೈಕ್ಷಣಿಕ ಹಂತಗಳ ವೃತ್ತಿ ಪದೋನ್ನತಿಯು ಸ್ಥಳೀಯ/ ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಟ್ಟಿದ್ದು, ಯಾವುದೇ ಅಸಂಗತೆ ಮಾಹಿತಿ ಕಂಡು ಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.
7. ವೃತ್ತಿ ಪದೋನ್ನತಿ ಮಂಜೂರಾತಿ ಆದೇಶದ ಮೇರೆಗೆ ಪ್ರಾಂಶುಪಾಲರು ಎಲ್ಲಾ ದಾಖಲಾತಿಗಳನ್ನು ಮತ್ತೊಮ್ಮೆ ಪರಿಶೀಲಿಸಿದ ನಂತರ ಪ್ರಾಧ್ಯಾಪಕರ ವೇತನ ನಿಗದೀಕರಣದ ಬಗ್ಗೆ ಅಗತ್ಯ ಕ್ರಮಕೈಗೊಳ್ಳತಕ್ಕದ್ದು.
8. ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ಹಾಗೂ ತಿದ್ದುಪಡಿ ನಿಯಮಗಳು 2015ರನ್ವಯ ಸರ್ಕಾರಿ ನೌಕರರು ಸರ್ಕಾರದಿಂದ ನಿಗದಿಪಡಿಸಲಾಗಿರುವ ಅಧಿಕೃತ ಏಜೆನ್ಸಿಯಾದ KEONICS ನಿಂದ ನಡೆಸಲಾಗುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಬೇಕಾಗಿರುತ್ತದೆ. ಆದುದರಿಂದ ಈ ಆದೇಶದಲ್ಲಿ ಎ.ಜಿ.ಪಿ. ಮಂಜೂರಾಗಿರುವ ಉಪನ್ಯಾಸಕರು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಪೂರೈಸಿ ಸಲ್ಲಿಸುವಂತಹ ಪ್ರಮಾಣ ಪತ್ರಗಳನ್ನು ಅವರುಗಳ ಎ.ಜಿ.ಪಿ. ದಾಖಲಾತಿಗಳೊಂದಿಗೆ ಕಾಲೇಜಿನಲ್ಲಿ ಸಂರಕ್ಷಿಸುವಂತೆ ಪ್ರಾಂಶುಪಾಲರಿಗೆ ತಿಳಿಸಲಾಗಿದೆ.
9. ಬೋಧಕರ ವಿವಿಧ ವಿಶ್ವವಿದ್ಯಾಲಯಗಳಿಂದ ಪಡೆದಿರುವ ಪಿಹೆಚ್‌ಡಿ ಪದವಿಯ ನೈಜತೆಯ ಆಧಾರದ ಮೇಲೆ ಆದೇಶ ಹೊರಡಿಸಲಾಗಿದ್ದು, ಈ ಬಗ್ಗೆ ಮುಂದೆ ಅಸಂಗತೆ ಕಂಡುಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಆದೇಶವನ್ನು ರದ್ದುಪಡಿಸುವ ಷರತ್ತಿಗೊಳಪಟ್ಟಿರುತ್ತದೆ.
10. ಸ್ಥಾನೀಕರಣ ಮಂಜೂರಾತಿ ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ದೃಢೀಕರಣ ಪತ್ರಗಳಲ್ಲಿನ ಮಾಹಿತಿಯಲ್ಲಿ ಯಾವುದೇ ವ್ಯತಿರಕ್ತ ಮಾಹಿತಿ ಕಂಡು ಬಂದಲ್ಲಿ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ. ಅಲ್ಲದೇ ಸುಳ್ಳು ಮಾಹಿತಿ/ಅಕ್ರಮ ದಾಖಲೆ ನೀಡಿದ ಅಧ್ಯಾಪಕರಿಗೆ ಮಂಜೂರಾತಿ ಆದೇಶವನ್ನು ರದ್ದುಗೊಳಿಸಲಾಗುವುದು.
11. ಉಲ್ಲೇಖ (04), (05) ಮತ್ತು (07) ರ ಸರ್ಕಾರದ ಆದೇಶದನ್ವಯ ಈ ಆದೇಶ ಹೊರಡಿಸಿದ ದಿನಾಂಕದಿಂದ ಭವಿಷ್ಯಾವರ್ತಿಯಾಗಿ ಪ್ರಾಧ್ಯಾಪಕರು ಶೈಕ್ಷಣಿಕ ಹಂತ 14 ರ ಸ್ಥಾನೀಕರಣದ ಆರ್ಥಿಕ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ.

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:**

1. ಮಹಾಲೇಖಪಾಲರು, GE IV A (ಎ & ಇ ಲೆಕ್ಕ ಪರಿಶೋಧನೆ-1, ಲೆಕ್ಕ ಪರಿಶೋಧನೆ-2) ಕರ್ನಾಟಕ ರಾಜ್ಯ, ಬೆಂಗಳೂರು-560 001 – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಹಾಗೂ ಅನುಬಂಧದಲ್ಲಿರುವ ಬೋಧಕರು ಈ ಮಂಜೂರಾತಿ ಆದೇಶ

ಹೊರಡಿಸುವ ಪೂರ್ವದಲ್ಲಿಯೇ ವರ್ಗಾವಣೆ ಅಥವಾ ಇತರೆ ಕಾರಣಗಳಗಾಗಿ ಸ್ಥಳ ಬದಲಾವಣೆಯಾಗಿದ್ದಲ್ಲಿ ಅವರ ಪ್ರಭಾರ ವರ್ಗಾವಣೆ ಪ್ರಮಾಣ ಪತ್ರದಂತೆ (ಸಿ.ಟಿ.ಸಿ) ಮೂಲ ಕಾಲೇಜನ್ನು ಪರಿಗಣಿಸಲು ಕೋರಿದೆ.

2. ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಮೇಲ್ಕಂಡ ಆದೇಶವನ್ನು ಸಂಬಂಧಿಸಿದ ಸಹ ಪ್ರಾಧ್ಯಾಪಕರ ಗಮನಕ್ಕೆ ಬರುವಂತೆ ಸೂಚಿಸಲಾಗಿದೆ. ಉನ್ನತ ಶೈಕ್ಷಣಿಕ ಹಂತ 14 ರಲ್ಲಿ ವರದಿ ಮಾಡಿಕೊಂಡ ಬಗ್ಗೆ ಸಿ.ಟಿ.ಸಿ., ಅಂತಿಮ ವೇತನ ಪತ್ರಗಳೊಂದಿಗೆ ವೇತನ ನಿಗದೀಕರಣಕ್ಕಾಗಿ ಪ್ರಸ್ತಾವನೆಯನ್ನು ನೇರವಾಗಿ ಮಹಾಲೇಖಪಾಲರು, GE IV A (ಎ & ಇ ಲೆಕ್ಕ ಪರಿಶೋಧನೆ-1, ಲೆಕ್ಕ ಪರಿಶೋಧನೆ-2) ಕರ್ನಾಟಕ ರಾಜ್ಯ, ಬೆಂಗಳೂರು-560 001 ಇವರಿಗೆ ಕಳುಹಿಸಿ ಕೊಡುವಂತೆ ಸೂಚಿಸಲಾಗಿದೆ.

3. ಎಲ್ಲಾ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

4. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – **ಮೇಲ್ಕಂಡ ಆದೇಶ ಹಾಗೂ ಅನುಬಂಧವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧದಲ್ಲಿ ಅಗತ್ಯ ಕ್ರಮಕ್ಕಾಗಿ.**

<u>ಪ್ರತಿಯನ್ನು :</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು - 560 001 – ಮಾಹಿತಿಗಾಗಿ.
2. ವ್ಯವಸ್ಥಾಪಕರು/ಅಧೀಕ್ಷಕರು, ಆಯವ್ಯಯ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ವ್ಯವಸ್ಥಾಪಕರು/ಅಧೀಕ್ಷಕರು, ಸೇವಾ ವಿಭಾಗ-1, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ.

ಕಾಲೇಜು ಶಿಕ್ಷಣ ಇಲಾಖೆ

ಅನುಬಂಧ-01

**ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ನಿರ್ದೇಶಕರು/ಗ್ರಂಥಪಾಲಕರಿಗೆ ಸಿ.ಎ.ಎಸ್ ಅಡಿಯಲ್ಲಿ ಶೈಕ್ಷಣಿಕ ಹಂತ 13ಎ ಇಂದ ಶೈಕ್ಷಣಿಕ ಹಂತ 14 ಕ್ಕೆ ಸ್ಥಾನೀಕರಣವನ್ನುಮಂಜೂರು ಮಾಡಿರುವ ಪಟ್ಟಿ**

**ಆದೇಶ ಸಂಖ್ಯೆ: ಕಾಶಿಇ/77/ಶೈ.ಹಂತ/14/ಬಸ್ಥಾವಿ/2023-24. ದಿನಾಂಕ: 26-02-2024**

| ಕ್ರ ಸಂ | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು | ಶೈಕ್ಷಣಿಕ ಹಂತ 13 ಎ ರ ಮಂಜೂರು ಮಾಡಲಾಗಿರುವ ದಿನಾಂಕ | ಶೈಕ್ಷಣಿಕ ಹಂತ 14 ಗೆ ನಿಗದಿಪಡಿಸಲಾದ ದಿನಾಂಕ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಡಾ.ಭಾರತಿ ಟಿ.ಸಿ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನ್ಯಾಮತಿ | 15-11-2007 | 31-10-2017 | |
| 2 | ಡಾ.ಶಾಂಭವಿ ಎಸ್. | ಕನ್ನಡ | ಶ್ರೀಮತಿ ವಿ.ಹೆಚ್.ಡಿ ಕೇಂದ್ರಿಯ ಗೃಹವಿಜ್ಞಾನ ಕಾಲೇಜು, ಬೆಂಗಳೂರು | 11-07-2015 | 31-03-2019 | |
| 3 | ಡಾ ಜಿ ರವಿ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಾಡುಗುಡಿ ಬೆಂಗಳೂರು | 28-02-2009 | 31-10-2018 | |
| 4 | ಡಾ.ಅನಂತ.ಎಸ್ | ರಾಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ | 15-11-2007 | 30-06-2019 | |
| 5 | ಡಾ.ವಿನಯ್ ಕುಮಾರ್ ಪಿ.ಎನ್ | ಗಣಿತಶಾಸ್ತ್ರ | ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ | 29-03-2020 | 29-03-2023 | |
| 6 | ಡಾ.ರೂಪ ಎಂ.ಸಿ | ಗಣಿತಶಾಸ್ತ್ರ | ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ & ನಿರ್ವಹಣಾ ಕಾಲೇಜು, ಬೆಂಗಳೂರು | 05-06-2012 | 31-01-2018 | |
| 7 | ಡಾ.ಪ್ರಾಣೇಶ ಕುಲಕರ್ಣಿ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು | 05-07-2010 | 31-03-2021 | |
| 8 | ಡಾ.ಸೋಮಶೇಖರ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಲೂರು | 30-05-2017 | 12-07-2021 | |
| 9 | ಡಾ.ಬಿ.ಶ್ಯಾಮಲ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನಕಪುರ | 24-08-2017 | 20-04-2021 | |
| 10 | ಡಾ.ಶರಣಬಸವೇಶ್ವರ ವಿ.ಡಾಣಿ | ಇತಿಹಾಸ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಷ್ಟಗಿ | 01-08-2010 | 31-11-2014 | |
| 11 | ಡಾ.ಬಿ.ಸುರೇಶ | ಇತಿಹಾಸ | ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ | 21-08-2016 | 21-08-2019 | |
| 12 | ಡಾ.ಮಂಜುನಾಥ ಸಕಲೇಶ್ | ಇತಿಹಾಸ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಮನೆ, ಭದ್ರಾವತಿ | 06-10-2008 | 31-05-2016 | |
| 13 | ಡಾ.ರಾಜು ಆರ್.ಕೆ | ಭೌತಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಿಪ್ಪನ್‌ಪೇಟೆ | 17-07-2020 | 17-07-2023 | |
| 14 | ಡಾ.ಸೋಮಶೇಖರಯ್ಯ ಎಸ್ ಬೆಲ್ಲದ್ | ಭೌತಶಾಸ್ತ್ರ | ಮಮವಿಕಾ, ಬೆಂಗಳೂರು | 29-07-2020 | 29-07-2023 | |

ಕಾಲೇಜು ಶಿಕ್ಷಣ ಇಲಾಖೆ

ಅನುಬಂಧ-01

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ನಿರ್ದೇಶಕರು/ಗ್ರಂಥಪಾಲಕರಿಗೆ ಸಿ.ಎ.ಎಸ್ ಅಡಿಯಲ್ಲಿ ಶೈಕ್ಷಣಿಕ ಹಂತ 13ಎ ಇಂದ ಶೈಕ್ಷಣಿಕ ಹಂತ 14 ಕ್ಕೆ ಸ್ಥಾನೀಕರಣವನ್ನುಮಂಜೂರು ಮಾಡಿರುವ ಪಟ್ಟಿ

**ಆದೇಶ ಸಂಖ್ಯೆ: ಕಾಶಿಇ/77/ಶೈ.ಹಂತ/14/ಬಸ್ಥಾವಿ/2023-24. ದಿನಾಂಕ: 26-02-2024**

| ಕ್ರ ಸಂ | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು | ಶೈಕ್ಷಣಿಕ ಹಂತ 13 ಎ ರ ಮಂಜೂರು ಮಾಡಲಾಗಿರುವ ದಿನಾಂಕ | ಶೈಕ್ಷಣಿಕ ಹಂತ 14 ಗೆ ನಿಗದಿಪಡಿಸಲಾದ ದಿನಾಂಕ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 15 | ಡಾ ಸತೀಶ ಎಲ್ ಎ | ಭೌತಶಾಸ್ತ್ರ | ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು | 14-07-2020 | 14-07-2023 | |
| 16 | ಡಾ.ವೆಂಕಟೇಶ್ ಬಾಬು ಕೆ.ಆರ್ | ಭೌತಶಾಸ್ತ್ರ | ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು | 20-07-2019 | 14-06-2023 | |
| 17 | ಡಾ.ಅರ್ಜುನಗೌಡ ಕೆ.ವಿ | ಭೌತಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಕೋಟೆ | 29-07-2020 | 29-07-2023 | |
| 18 | ಡಾ.ರಾಜೇಶ್ವರಿ.ಎ | ಸಮಾಜಶಾಸ್ತ್ರ | ಮಮಕವಾನಿಕಾ, ಬೆಂಗಳೂರು | 29-05-2016 | 29-05-2019 | |
| 19 | ಡಾ.ಯಂಕಣ್ಣ | ಸಮಾಜಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು | 15-11-2007 | 01-01-2021 | |
| 20 | ಡಾ ಶಕುಂತಲ | ಸಮಾಜಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಗಾರಪೇಟೆ | 27-03-2011 | 01-04-2017 | |
| 21 | ಡಾ.ಬಸವರಾಜಪ್ಪ.ಕೆ.ವಿ | ರಸಾಯನಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ | 17-07-2020 | 17-07-2023 | |
| 22 | ಡಾ.ನಾಗೇಶ್ ಬಾಬು ಆರ್ | ರಸಾಯನಶಾಸ್ತ್ರ | ಮಮವಿಕಾ, ಬೆಂಗಳೂರು | 28-07-2020 | 28-07-2023 | |
| 23 | ಡಾ.ವೀಣಾ.ಕೆ | ರಸಾಯನಶಾಸ್ತ್ರ | ಮಮವಿಕಾ, ಬೆಂಗಳೂರು | 14-07-2019 | 14-07-2022 | |
| 24 | ಡಾ.ಶೀತಲ್ ಮರ್‌ಗಾನಕೊಪ್ | ರಸಾಯನಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಜಾನಗರ ಹುಬ್ಬಳ್ಳಿ | 26-07-2020 | 26-07-2023 | |
| 25 | ಡಾ.ಎಂ.ಎನ್.ಕುಮಾರ ಸ್ವಾಮಿ | ರಸಾಯನಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು | 17-07-2020 | 17-07-2023 | |
| 26 | ಡಾ.ಕವಿತ.ಸಿ.ಎನ್ | ರಸಾಯನಶಾಸ್ತ್ರ | ಸರ್ಕಾರಿ ವಿಜ್ಞಾನ ಕಾಲೇಜು (ಸ್ವಾಯತ್ತ) ಹಾಸನ | 28-07-2020 | 28-07-2023 | |
| 27 | ಡಾ.ರಾಘವೇಂದ್ರ ಎಂ.ಪಿ | ಸೂಕ್ಷ್ಮಜೀವಶಾಸ್ತ್ರ | ಮಮವಿಕಾ, ಮೈಸೂರು | 15-07-2020 | 15-07-2023 | |
| 28 | ಡಾ.ಎಂ.ಭೂಷಣಂ | ಪ್ರಾಣಿಶಾಸ್ತ್ರ | ಮಮವಿಕಾ, ಬೆಂಗಳೂರು | 24-12-2019 | 04-07-2023 | |
| 29 | ಡಾ.ರಾಜಶೇಖರ ಧ.ಬೆನಕನಹಳ್ಳಿ | ದೈಹಿಕ ಶಿಕ್ಷಣ | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ವಿಜಯಪುರ | 03-02-2018 | 03-02-2021 | |

ಕಾಲೇಜು ಶಿಕ್ಷಣ ಇಲಾಖೆ

ಅನುಬಂಧ-01

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ನಿರ್ದೇಶಕರು/ಗ್ರಂಥಪಾಲಕರಿಗೆ ಸಿ.ಎ.ಎಸ್ ಅಡಿಯಲ್ಲಿ ಶೈಕ್ಷಣಿಕ ಹಂತ 13ಎ ಇಂದ ಶೈಕ್ಷಣಿಕ ಹಂತ 14 ಕ್ಕೆ ಸ್ಥಾನೀಕರಣವನ್ನುಮಂಜೂರು ಮಾಡಿರುವ ಪಟ್ಟಿ

**ಆದೇಶ ಸಂಖ್ಯೆ: ಕಾಶಿಇ/77/ಶೈ.ಹಂತ/14/ಬಸ್ಥಾವಿ/2023-24. ದಿನಾಂಕ: 26-02-2024**

| ಕ್ರ ಸಂ | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು | ಶೈಕ್ಷಣಿಕ ಹಂತ 13 ಎ ರ ಮಂಜೂರು ಮಾಡಲಾಗಿರುವ ದಿನಾಂಕ | ಶೈಕ್ಷಣಿಕ ಹಂತ 14 ಗೆ ನಿಗದಿಪಡಿಸಲಾದ ದಿನಾಂಕ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 30 | ಡಾ.ಜಾನ್ ಪಿಂಟೋ | ದೈಹಿಕ ಶಿಕ್ಷಣ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳೆಯಂಗಡಿ | 01-07-2013 | 01-07-2016 | |
| 31 | ಡಾ.ಎಂ.ಮಂಜುನಾಥ | ಗ್ರಂಥಪಾಲಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಜಾಜಿನಗರ | 31-05-2020 | 31-05-2023 | |
| 32 | ಡಾ.ಈಶ್ವರಪ್ಪ.ಎಂ | ವಾಣಿಜ್ಯಶಾಸ್ತ್ರ | ಮಮಕವಾನಿಕಾ, ಬೆಂಗಳೂರು | 28-05-2017 | 28-08-2020 | |
| 33 | ಡಾ.ಎನ್.ಎಲ್.ವಿಜಯ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ಬಾಳ | 23-08-2018 | 23-08-2021 | |
| 34 | ಡಾ.ಜಗದೀಶ ಬಾಳ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬಲ್ಮಠ | 25-01-2010 | 23-09-2019 | |
| 35 | ಡಾ.ಶ್ರೀದೇವಿ ವಿ.ಪಟ್ಟೇದ್ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ | 18-07-2015 | 30-10-2018 | |
| 36 | ಡಾ.ಲಕ್ಷ್ಮಿ.ಟಿ | ವಾಣಿಜ್ಯಶಾಸ್ತ್ರ | ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ | 13-08-2017 | 13-08-2020 | |

ಆಯುಕ್ತರು
26/2/2024

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ